ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆಕ್‌ಪೋಸ್ಟ್‌ಗಳ ಸಂಖ್ಯೆ

94- ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡದಲ್ಲಿ ಇರುವ ಕಮರ್ಷಿಯಲ್ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು? ಅವು ಎಲ್ಲೆಲ್ಲಿ ಇವೆ (ವಿವರ ನೀಡುವುದು)*

ಆ) *ಆ ಚೆಕ್‌ಪೋಸ್ಟ್‌ಗಳಲ್ಲಿ ಅನೇಕ ಕಡೆ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ?*

ಇ) *ಮುಕ್ಕ, ತೊಗೊಟು ಚೆಕ್‌ಪೋಸ್ಟ್‌ಗಳಲ್ಲಿ ಅನ್ಯಾಯ ನಡೆಯುತ್ತಿದ್ದು, ತಪಾಸಣೆ ಇಲ್ಲದೆ ಲಾರಿಗಳನ್ನು, ಸರಕುಗಳನ್ನು, ಚೆಕ್‌ಪೋಸ್ಟ್‌ಗಳಲ್ಲಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಇದನ್ನು ನಿಲ್ಲಿಸಲು ಕಠಿಣ ತಪಾಸಣೆ ಮಾಡಲಾಗುವುದೇ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 8 (ವಿವರಗಳನ್ನು ಲಗತ್ತಿಸಿದೆ)

ಆ) ಯಾವುದೇ ನಿರ್ದಿಷ್ಟ ದೂರು ಬಂದಿಲ್ಲ.

ಇ) ಇಲ್ಲ

ಈ) ಅವಶ್ಯಕವಿರುವ ನಿಗಾವನ್ನು ವಹಿಸಲಾಗುತ್ತಿದೆ.

ರಹದಾರಿ ಇಲ್ಲದೆ ನಡೆಯುವ ಖಾಸಗೀವಾಹನಗಳಿಂದ ಸಾರಿಗೆಸಂಸ್ಥೆಗೆ ನಷ್ಟ.

47-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಹದಾರಿ ಇಲ್ಲದೆ ಖಾಸಗಿ ವಾಹನಗಳು ರಾಜ್ಯದಲ್ಲಿ ಓಡಾಡುತ್ತಿರುವುದರಿಂದ ಸಾರಿಗೆ ಸಂಸ್ಥೆಯ ಆದಾಯಕ್ಕೆ ಧಕ್ಕೆ ತಗಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ರಹದಾರಿಯಿಲ್ಲದ ವಾಹನಗಳ ಸುಳಿವು ಸಿಕ್ಕಿದರೂ ಸರ್ಕಾರ ಕ್ರಮ ಕೈಗೊಳ್ಳದೆ ಇರುವುದು ನಿಜವಲ್ಲವೆ?*

ಇ) *ಆದರಿಂದ ಅನಾವಶ್ಯಕವಾಗಿ ಖಾಸಗಿಯವರಿಗೆ ಲಾಭ ಮಾಡಲು ನೆರವು ನೀಡಿದಂತಾಗುವುದಿಲ್ಲವೇ?*

ಈ) *ರಹದಾರಿ ಇಲ್ಲದ ಖಾಸಗಿ ಬಸ್ಸುಗಳನ್ನು ಮತ್ತು ಅಂತಹ ವಾಹನಗಳನ್ನು ಕೂಡಲೇ ರದ್ದುಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ರಹದಾರಿ ಇಲ್ಲದೆ ಓಡಾಡುವ ಖಾಸಗಿ ವಾಹನಗಳ ನೊಂದಣಿ ಪುಸ್ತಕವನ್ನು ಅಮಾನತ್ತುಪಡಿಸುವ ಕ್ರಮವನ್ನು ತೆಗೆದುಕೊಳ್ಳುವುದಲ್ಲದೆ ಅಭಿಯೋಜನೆ ಕ್ರಮವನ್ನೂ ಕೂಡ ತೆಗೆದುಕೊಳ್ಳಲಾಗುತ್ತಿದೆ.